

ಸಾಗಣೆಗೆ ಸಿದ್ಧಗೊಂಡಿರುವ ಉಪ್ಪು

ಇರುತ್ತಾರೆ. ಇದೊಂದು ನಿರಂತರ ಪ್ರಕ್ರಿಯೆ. ಒಂದು ಗಾಮ್ಡಾದಿಂದ ಇನ್ನೊಂದಕ್ಕೆ ಲವಣಜಲ ಎಷ್ಟು ಸಾಂದ್ರಗೊಂಡ ನಂತರ ಹರಿಸಬೇಕು ಎನ್ನುವುದನ್ನು ಅನುಭವಿ ಅಗರಿಯಾಗಳು ಬೆರಳಿನಲ್ಲಿ ಮುಟ್ಟಿನೋಡಿ, ಎರಡು ಬೆರಳುಗಳ ನಡುವೆ ಅದನ್ನು ಒಮ್ಮೆ ತಿಕ್ಕಿದಂತೆ ಮಾಡಿ, 'ಪಾನೀ ಕಾ ಜಾರಾ' – ಅಂದರೆ ಕ್ಷಾರತೆಯನ್ನು ಗುರುತಿಸುತ್ತಾರೆ. ಕೆಲವೊಮ್ಮೆ ಬಾಮಿಮೀಟರ್ ಬಳಸಿ ಡಿಗ್ರಿ ಅಳೆಯುತ್ತಾರೆ.

ಪ್ರತಿಯೊಬ್ಬರೂ ಹೆಚ್ಚುಕಡಿಮೆ 500–800 ಟನ್ ಉಪ್ಪು ಮಾಡುತ್ತಾರೆ. ಆರಂಭದಿಂದಲೇ ಬಾವಿಯಲ್ಲಿ ಒಳ್ಳೆಯ ಸೆಲೆ ಇತ್ತು, ಲವಣಜಲ ಚೆನ್ನಾಗಿ ಬರುತ್ತಿತ್ತು ಎಂದಾದರೆ 800 ಟನ್ ಉಪ್ಪು ಸಿಗಬಹುದು. ನವೆಂಬರಿನಲ್ಲಿ ಮಳೆ ಬಂದು, ತುಸು ತಡವಾಗಿ ಕೆಲಸಗಳು ಶುರುವಾದಾಗ ಅಥವಾ ಒಂದು ಬಾವಿಯಲ್ಲಿ ಹೆಚ್ಚು ಲವಣಜಲ ಸಿಗದಿದ್ದಾಗ ಮತ್ತೊಂದು ಬಾವಿ ತೋಡಿ, ಮತ್ತೆ ಪರಿಶೀಲನೆಗೆ ಹೋದಾಗ ಸಹಜವಾಗಿ ಇಳುವರಿ 600 ಟನ್‌ಗಿಂತಲೂ ಕಡಿಮೆ ಆಗುವುದೂ ಉಂಟು.

## ವ್ಯಾಪಾರಿಗಳ ಕಪಿಮುಷ್ಟಿ

ಬಹುತೇಕ ಅಗರಿಯಾಗಳು ಹಳ್ಳಿಗಳಲ್ಲಿ ಸ್ವಂತಕ್ಕೆ ಜಮೀನು ಇಲ್ಲದವರು. ತಲೆತಲಾಂತರದಿಂದ ರಣ್‌ಗೆ ಹೋಗಿ ಉಪ್ಪು ಮಾಡಿ, ಮಾರಾಟ ಮಾಡಿ ಬದುಕು ನಡೆಸುವವರು. ಉಪ್ಪು ತಯಾರಿಸುವ ಕೌಶಲ ಹೊರತುಪಡಿಸಿದರೆ ಬೇರೆ ಕಾಯಕ ಗೊತ್ತಿಲ್ಲ ಇವರಿಗೆ. ಸ್ವಾತಂತ್ರ್ಯಪೂರ್ವದಲ್ಲಿಯೇ ರಣ್‌ನಲ್ಲಿ ಪ್ರತಿಯೊಬ್ಬರಿಗೂ ಮೂರು ಅಥವಾ ನಾಲ್ಕು ಎಕರೆ ಭೂಮಿಯಲ್ಲಿ ಉಪ್ಪು ತಯಾರಿಸಲು ಲೈಸೆನ್ಸ್ ನೀಡಲಾಗಿತ್ತು. ಆ ಪರವಾನಗಿಯನ್ನು ಕಾಲದಿಂದ ಕಾಲಕ್ಕೆ ನವೀಕರಣ ಮಾಡಲಾಗಿದೆ. ಆದರೆ ಈಗ ಎರಡು ದಶಕಗಳಿಂದ ಪರವಾನಗಿ ನವೀಕರಿಸಿಲ್ಲ. ಯಾಕೆಂದರೆ, ಇಲ್ಲಿ ಅಪರೂಪದ ಕಾಡುಕತ್ತೆಗಳು, ನೂರಾರು ಪ್ರಭೇಧದ ಹಕ್ಕಿಗಳು, ಸರೀಸೃಪಗಳು ಮತ್ತು ಇನ್ನಿತರ ಜೀವಿಗಳು ಇರುವುದರಿಂದ ಈ ಇಡೀ ಪ್ರದೇಶವನ್ನು 1972ರ ವನ್ಯಜೀವಿ ಸಂರಕ್ಷಣಾ ಕಾಯಿದೆಯಡಿಯಲ್ಲಿ 'ಕಾಡುಕತ್ತೆಗಳ ಅಭಯಾರಣ್ಯ' (Wild Ass Sanctuary) ಎಂದು ಘೋಷಿಸಲಾಗಿದೆ. ಅರಣ್ಯ ಇಲಾಖೆಯ ಪ್ರಕಾರ ಇಲ್ಲೀಗ ಉಪ್ಪು ಮಾಡುವುದು

## ಮೊಬೈಲ್ ಶಾಲೆಗಳು

ಭೋಟಾ ರಣ್‌ನಲ್ಲಿ ರಣಗುಡುವ ಬಿಸಿಲಿನಲ್ಲಿ ಅಲ್ಲಲ್ಲಿ ಒಂದು ಬಸ್ಸು ಮಾತ್ರ ತಣ್ಣಗೆ ನಿಂತಿರುತ್ತದೆ. ಒಂದರಿಂದ ಎಂಟನೇ ತರಗತಿಯವರೆಗಿನ ಎಲ್ಲ ವಯೋಮಾನದ ಮಕ್ಕಳು ಚಿಲಿಪಿಲಿಗುಡುತ್ತ, 'ನಿನ್ನೆ ಕೊಟ್ಟಿದ್ದು ಬರೆದೆಯಾ, ನಂಗೆ ಗೊತ್ತಾಗಲಿಲ್ಲ ಇವತ್ತು ಮೇಷ್ಟು ಏನು ಹೇಳಿಕೊಡಬಹುದು' ಎಂದು ಅಚ್ಚರಿಗಣ್ಣು ಮಾಡಿ ಕೂರುತ್ತಾರೆ. ನಿಜ, ಎಂಟು ತಿಂಗಳು ಅಪ್ಪ–ಅಮ್ಮನೊಂದಿಗೆ ರಣದಲ್ಲಿ ಜೋಪಡಿಗಳಲ್ಲಿ ವಾಸಿಸುವ ಮಕ್ಕಳಿಗೆ ಈ ಬಸ್ಸೇ ಶಾಲೆಯಾಗಿರುತ್ತದೆ. ಇದು ''ಮೊಬೈಲ್ ಸ್ಕೂಲ್''.

ಸೇವಾ ಸಂಸ್ಥೆಯು 1991–92ರಲ್ಲಿ ರಣ್‌ನಲ್ಲಿ ಕೆಲಸ ಆರಂಭಿಸಿದಾಗ, ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯ ಆರೈಕೆಯ ಯಾವ ವ್ಯವಸ್ಥೆಯೂ ಇರಲಿಲ್ಲ. 3–5 ವರ್ಷದ ಎಳೆಯರಿಗೆ ಚೈಲ್ಡ್ ಕೇರ್ ಕೇಂದ್ರಗಳನ್ನು ತೆರೆದಾಗ ಸೇವಾ ಸಂಸ್ಥೆ ಶೇ. 25 ಹಾಗೂ ಸರ್ಕಾರ ಶೇ. 75 ಭರಿಸುತ್ತಿತ್ತು. ಸೇವಾಸಂಸ್ಥೆಯು ಹತ್ತಿರದ ಹಳ್ಳಿಗಳಲ್ಲಿ ಹೈಸ್ಕೂಲು, ಪಿಯುಸಿ ಮಾಡಿ, ಓದು ಬಿಟ್ಟಿದ್ದ ಹುಡುಗಿಯರು ಅಥವಾ ಮದುವೆಯಾದ ಹೆಣ್ಣುಮಕ್ಕಳಿಗೆ ಎಳೆಯ ಮಕ್ಕಳಿಗೆ ಆರೋಗ್ಯ ಆರೈಕೆ ಹಾಗೂ ಶಿಕ್ಷಣದ ಕುರಿತಾದ ತರಬೇತಿ ನೀಡಿ, ಈ ಕೇಂದ್ರಗಳಲ್ಲಿ ಅವರನ್ನು ಶಿಕ್ಷಕರ ಹಾಗೆ ನಿಯೋಜನೆ ಮಾಡುತ್ತಿತ್ತು. 2005ರವರೆಗೆ ಸೇವಾದ ಕೇಂದ್ರಗಳು ಉತ್ತಮ ರೀತಿಯಲ್ಲಿ ನಡೆಯುತ್ತಿದ್ದವು. ನಂತರ ಹಳ್ಳಿಗಳಲ್ಲಿ 'ಐಸಿಡಿಎಸ್'ನ ಅಂಗನವಾಡಿಗಳು ಆರಂಭಗೊಂಡ ನಂತರ, ಸರ್ಕಾರವು ಹಣಕಾಸಿನ ಸಹಾಯವನ್ನು ನಿಲ್ಲಿಸಿತು. ಈಗ ಮೂರು ಕಡೆಗಳಲ್ಲಿ ಮಾತ್ರ ಸೇವಾದ ಚೈಲ್ಡ್ ಕೇರ್ ಕೇಂದ್ರಗಳು ನಡೆಯುತ್ತಿವೆ. ರಣ್‌ನಲ್ಲಿ ಅಪ್ಪ–ಅಮ್ಮಂದಿರ ಜೊತೆಗೆ ಇರುವ ದೊಡ್ಡ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ಗಮನಿಸಿದ ಶಿಕ್ಷಣ ಇಲಾಖೆಯು ತದನಂತರ ಈ ಮೊಬೈಲ್ ಶಾಲೆಗಳನ್ನು ತೆರೆಯಿತು.

ಗಲಬೆಯಲ್ಲಿ ಅರೆಬರೆ ಸುಟ್ಟು, ಓಡಿಸಲು ಸಾಧ್ಯವಿಲ್ಲದಿದ್ದ 18 ಬಸ್ಸುಗಳನ್ನು ತಾತ್ಕಾಲಿಕ ಶಾಲೆಯಾಗಿ ರೂಪಿಸಿದ್ದಾರೆ. ಪ್ರತಿ ಬಸ್ಸಿನ ಮೇಲೆ ಜೋಡಿಸಿದ ಸೌರಫಲಕದಿಂದ ಒಳಗೆ ಫ್ಯಾನ್ ತಿರುಗುತ್ತದೆ. ಕುಳಿತುಕೊಳ್ಳಲು ವಿಶಾಲ ಜಾಗ, ಬೋರ್ಡು, ಚಾರ್ಟು – ಹೀಗೆ ಶಾಲಾ ಕೊಠಡಿಯ ರೀತಿಯಲ್ಲಿಯೇ ಸಜ್ಜುಗೊಳಿಸಿದ್ದಾರೆ. ಅಂದಹಾಗೆ ಈ 'ಮೊಬೈಲ್ ಬಸ್'ಗಳನ್ನು ಓಡಿಸಲಾಗುವುದಿಲ್ಲ, ಹೀಗಾಗಿ ಟ್ರ್ಯಾಕ್ಟರಿನ ಹಿಂಭಾಗಕ್ಕೆ ಜೋಡಿಸಿ, ರಣ್‌ದೊಳಗೆ ತಂದು, 18 ಸ್ಥಳಗಳಲ್ಲಿ ನಿಲ್ಲಿಸುತ್ತಾರೆ. ಎಂಟು



ಅಗರಿಯಾ ಸಮುದಾಯದ ಮಕ್ಕಳು ಕಲಿಯುವ ಮೊಬೈಲ್ ಶಾಲೆ
ಫೋಟೊ: ಅಹ್ಮದ್ ಶೇಕ್

ತಿಂಗಳು ಈ ಬಸ್ ಶಾಲೆ ಇದ್ದಲ್ಲಿಯೇ ಇರುತ್ತದೆ. ಏಪ್ರಿಲ್‌ನಲ್ಲಿ ಪರೀಕ್ಷೆಗಳು ಮುಗಿದ ನಂತರ, ಹತ್ತಿರದ ಹಳ್ಳಿಯ ಶಾಲೆಯ ಮುಂದೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತಾರೆ. ಅದೇ ಹತ್ತಿರದ ಹಳ್ಳಿಗಳ ಶಾಲೆಗಳಿಂದ ಶಿಕ್ಷಕರು ಇಲ್ಲಿಗೆ ನಿಯೋಜನೆಯಾಗುತ್ತಾರೆ. ಮಕ್ಕಳು ನೆರಳಿನಲ್ಲಿ, ತುಸು ಫ್ಯಾನ್ ಗಾಳಿಯಲ್ಲಿ ಕುಳಿತು, ಚೂರುಪಾರು ಓದಿ, ಬರೆದು ಮಾಡುತ್ತಾರೆ. ಜೂನ್‌ನಿಂದ ಅಕ್ಟೋಬರ್‌ವರೆಗೆ ಕಲಿತಿದ್ದನ್ನು ಪೂರ್ಣ ಮರೆಯದೇ, ಅಲ್ಪಸ್ವಲ್ಪ ನೆನಪಿನಲ್ಲಿ ಉಳಿಸಿಕೊಳ್ಳಲು ಇದು ಸಹಕಾರಿ. ಇಲ್ಲಿ ಒಂದೇ ಸಮಸ್ಯೆ ಎಂದರೆ ಪ್ರತಿ ತಿಂಗಳು ಶಿಕ್ಷಕರು ಬದಲಾಗುತ್ತಾರೆ.

'ಕೂಡ' ಎಂಬ ಹಳ್ಳಿಯ ಶಾಲೆಯಿಂದ ಇಂಥದೊಂದು ಮೊಬೈಲ್ ಶಾಲೆಯಲ್ಲಿ ಕಲಿಸುತ್ತಿದ್ದ ಶಿಕ್ಷಕರಾದ ಮಹೇಂದ್ರ, ''ನಮಗೆ ಇಲ್ಲಿ ಮುಖ್ಯವಾದ ಸವಾಲು ಎಂದರೆ ಬಹುವರ್ಗಕ್ಕೆ ಕಲಿಸುವುದು ಹಾಗೂ ಹಿಂದಿನ ಶಿಕ್ಷಕರು ಹೇಳಿಕೊಟ್ಟಿದ್ದನ್ನು ಮುಂದುವರೆಸಿಕೊಂಡು ಹೋಗುವುದು. ನಮ್ಮ ಮಕ್ಕಳು ಯಾವ ಹಂತಗಳಲ್ಲಿ ಇದ್ದಾರೆ ಎಂದು ಅರಿತು, ಅವರೊಂದಿಗೆ ಸಂಬಂಧ ಬೆಳೆಸಿಕೊಂಡು, ಕಲಿಸಲು ಶುರುಮಾಡುವ ವೇಳೆಗೆ ನಾವು ಅಲ್ಲಿಂದ ಹೋಗುವ ಸಮಯ ಬರುತ್ತದೆ. ಮತ್ತೆ ಹೊಸ ಶಿಕ್ಷಕರು ಬರುತ್ತಾರೆ. ಹೀಗೆ ಒಂದೊಂದು ತಿಂಗಳಿಗೆ ಒಬ್ಬೊಬ್ಬ ಶಿಕ್ಷಕರನ್ನು ನಿಯೋಜನೆ ಮಾಡುವ ಬದಲಿಗೆ ಪೂರ್ಣ ಎಂಟು ತಿಂಗಳಿಗೆ ಒಬ್ಬರನ್ನೇ ನಿಯೋಜಿಸಿದರೆ ಒಳ್ಳೆಯದು'' ಎನ್ನುತ್ತಾರೆ.